ಸರಳಾಬಾಯಿಗೆ ಏಕಕಾಲಕ್ಕೆ ಒಗಟಾಗಿಯೂ ಸಮಸ್ಯೆಯಾಗಿಯೂ ಕಾಡತೊಡಗಿತು.

ಸಂದರ್ಶನದ ದಿನ ಸರಿಯಾಗಿ ಬೆಳಗ್ಗಿನ ಹತ್ತುಗಂಟೆಗೆ ಪ್ರೇಮಚಂದ ಕಂಪನಿಯ ಹೆಡ್ ಆಫೀಸಿನಲ್ಲಿದ್ದ. ಸಂದರ್ಶನದ ಕೊಠಡಿ ಎದುರಿನ ಉದ್ದನೆಯ ಸಾಲಿನತ್ತ ದೃಷ್ಟಿ ಹರಿಸಿದವನಿಗೆ ನಿಂತಿದ್ದವರಲ್ಲಿ ಒಂದೆರಡು ಪರಿಚಿತ ಮುಖಗಳು ಕಣ್ಣಿಗೆ ಕಾಣಿಸಿ ಮನಸ್ಸಿಗೆ ಸಮಾಧಾನವಾಯಿತು. ರಿಸೆಪ್ಷನ್ ಕೌಂಟರ್‌ನಲ್ಲಿ ಹೆಸರು ನೋಂದಾಯಿಸಿ ತನ್ನ ದಾಖಲೆಗಳನ್ನು ಪರಿಶೀಲನೆಗೆ ಕೊಟ್ಟು ಅವರಿಂದ ಚೆಕ್‌ಲಿಸ್ಟ್ ಪಡೆದು ಉದ್ದನೆಯ ಸರತಿ ಸಾಲಿನಲ್ಲಿ ತಾನೂ ಒಬ್ಬನಾಗಿ ನಿಂತ. ಪ್ರೇಮಚಂದ ಸಂದರ್ಶನದ ಕೊಠಡಿಯೊಳಗೆ ಕಾಲಿಡುವ ವೇಳೆಗಾಗಲೇ ಮಧ್ಯಾಹ್ನದ ಹನ್ನೆರಡು ದಾಟಿತ್ತು. ವಾತಾನುಕೂಲ ಸೌಲಭ್ಯದ ಕೊಠಡಿಯಲ್ಲಿ ಅಂಥ ರಣಗುಟ್ಟುವ ಭಯಂಕರ ಬೇಸಿಗೆಯಲ್ಲೂ ತಂಪಾದ ಗಾಳಿ ತುಂಬಿಕೊಂಡಿತ್ತು. ಕೂಡಲು ಮೆತ್ತನೆಯ ಸುಖಾಸೀನಗಳು, ಕಿಟಕಿಗಳಿಂದ ಒಳಗೆ ತೂರದಂತೆ ಪ್ರಖರ ಬಿಸಿಲನ್ನು ಮರೆಮಾಚಿದ ಆಕರ್ಷಕ ಪರದೆಗಳು, ಹೂದಾನಿಯಲ್ಲಿ ಅರಳಿನಿಂತಿರುವ ಬಣ್ಣಬಣ್ಣದ ಹೂಗಳು, ಮೈಸೋಕುತ್ತಿರುವ ತಂಪಾದ ಹವೆ ಅರೆಕ್ಷಣ ಪ್ರೇಮಚಂದನಿಗೆ ತಾನು ನಿಂತಿರುವ ಆ ಜಾಗ ಇಂದ್ರನ ಅಮರಾವತಿಯಂತೆ ಭಾಸವಾಯಿತು. ತಾನು ನಿಂತಿರುವ ಜಾಗಕ್ಕೆ ಎದುರಾಗಿ ಮೆತ್ತನೆಯ ಕುರ್ಚಿಗಳ ಮೇಲೆ ಆಸೀನಗೊಂಡಿದ್ದ ಮೂರು ಅಪರಿಚಿತ ಮುಖಗಳು ಗೋಚರಿಸಿದವು. ಅವರಿಗೆದುರಾಗಿ ಇಟ್ಟಿದ್ದ ಖಾಲಿ ಕುರ್ಚಿಯಲ್ಲಿ ಕುಳಿತವನು ಕೇಶವರಾವ್ ಸಾಳುಂಕೆ ಕಾಣಿಸಬಹುದೇನೋ ಎಂದು ಸುತ್ತಲೂ ಕಣ್ಣಾಡಿಸಿದ. ಕಂಪನಿಯ ಹೆಡ್ ಆಫೀಸಿನ ಈ ಜಾಗಕ್ಕೆ ಐದು ವರ್ಷಗಳ ಹಿಂದೆ ಬಂದಿದ್ದ ನೆನಪು ಪ್ರೇಮಚಂದನ ಮನಸ್ಸಿನಲ್ಲಿ ಇನ್ನೂ ಮಾಸಿರಲಿಲ್ಲ. ಕಂಪನಿಯ ಇಪ್ಪತ್ತೈದನೆ ವರ್ಷಾಚರಣೆಯ ನಿಮಿತ್ತ ಅಂದಿನ ಕಂಪನಿಯ ಮುಖ್ಯಸ್ಥರಾಗಿದ್ದ ಕೇಶವರಾವ್ ಸಾಳುಂಕೆ ಅವರನ್ನು ಸಂದರ್ಶನ ಮಾಡಲು ಮ್ಯಾನೇಜರ್ ರಾಮನಾಥ ಚಿದ್ರಿ ತನ್ನನ್ನು ಹೆಡ್ ಆಫೀಸಿಗೆ ಕಳುಹಿಸಿದ್ದು ನೆನಪಾಯಿತು. ಅಂದು ಇಡೀ ಅರ್ಧದಿನ ಕೇಶವರಾವ್ ಸಾಳುಂಕೆ ಪ್ರೇಮಚಂದನೊಂದಿಗೆ ಕಳೆದಿದ್ದರು. ಚೇಂಬರಿಗೆ ಊಟ ತರಿಸಿ ಪ್ರೇಮಚಂದನೊಂದಿಗೆ ನಗುನಗುತ್ತ ಊಟ ಮಾಡಿದ್ದರು. ಮರುದಿನ ಸಾಳುಂಕೆ ಅವರ ಸಂದರ್ಶನದೊಂದಿಗೆ ಪ್ರೇಮಚಂದ ಬರೆದ ವಿವರವಾದ ಲೇಖನ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿ ಅವನಲ್ಲಿ ಧನ್ಯತೆಯ ಭಾವವನ್ನು ಮೂಡಿಸಿತ್ತು. ಇನ್ನುಮುಂದೆ ಕಂಪನಿಯ ಮುಖ್ಯಸ್ಥರ ನೆನಪಿನಲ್ಲಿ ತನ್ನ ಚಿತ್ರ ಸ್ಥಿರವಾಗಿ ನೆಲೆಸುತ್ತದೆ ಎಂದು ಭಾವಿಸಿದ್ದ ಪ್ರೇಮಚಂದನಿಗೆ ಮುಂದೊಮ್ಮೆ ಕೇಶವರಾವ್ ಸಾಳುಂಕೆ ಬ್ರ್ಯಾಂಚ್ ಆಫೀಸಿಗೆ ಭೇಟಿ ನೀಡಿದ ಸಂದರ್ಭ ಯಾರು ನೀನು ಎಂದು ಪ್ರಶ್ನಿಸಿ ಅವನ ಅಸ್ತಿತ್ವವನ್ನೇ ಅಲುಗಾಡಿಸಿದ್ದರು. ಈ ಘಟನೆಯ ಅನಂತರ ಪ್ರೇಮಚಂದ ಇನ್ನುಮುಂದೆ ದೊಡ್ಡವರ ಸಹವಾಸವೇ ಸಾಕು ಎನ್ನುವಂತೆ ತಾನಾಯ್ತು ತನ್ನ ಕೆಲಸವಾಯ್ತು ಎನ್ನುತ್ತ ಯಾವ ಉಸಾಬರಿಗೂ ಹೋಗದೆ ಬದುಕುವುದನ್ನು ರೂಢಿಸಿಕೊಂಡಿದ್ದ.

ಹಿಂದಿನದೆಲ್ಲ ನೆನಪಾಗಿ ಈಗ ಸಾಳುಂಕೆ ಅಮೆರಿಕದಲ್ಲಿ ವಾಸಿಸುತ್ತಿರುವ ಸಂಗತಿ ಮನಸ್ಸಿಗೆ ಹೊಳೆದು ಪ್ರೇಮಚಂದ ತಾನು ಸಂದರ್ಶನದ ಕೊಠಡಿಯಲ್ಲಿ ಕುಳಿತಿರುವುದನ್ನು ಸ್ಮರಣೆಗೆ ತಂದುಕೊಂಡ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಆಳುವ ಪಕ್ಷದ ಕಿರುಕುಳದಿಂದ ಬೇಸತ್ತು ಕೇಶವರಾವ್ ಸಾಳುಂಕೆ ಕಂಪನಿಯನ್ನು ವಿಲೇವಾರಿಮಾಡಿ ಪತ್ನಿ ಸಮೇತ ಅಮೆರಿಕಕ್ಕೆ ಹೋಗಿ ನೆಲೆಸಿದ್ದರು. ಹೊಸ ಆಡಳಿತ ಮಂಡಳಿ ಕಂಪನಿಯ ಆಮೂಲಾಗ್ರ ಬದಲಾವಣೆಗಾಗಿ ಹೊಸ ನಿಯಮಗಳನ್ನು ಜಾರಿಗೆ ತಂದಿತ್ತು. ಆಡಳಿತ ಮಂಡಳಿಯ ಹೊಸ ನಿಯಮಗಳಿಗೆ ಹೊಂದಿಕೊಳ್ಳುವವರನ್ನು ಮಾತ್ರ ಕೆಲಸದಲ್ಲಿ ಮುಂದುವರೆಸುವುದು, ಹೊಂದಿಕೊಳ್ಳದವರನ್ನು ನೌಕರಿಯಿಂದ ವಜಾಗೊಳಿಸುವ ಯೋಜನೆಯ

